**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 12-02-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಶ್ರೀ.ಎಂಜೆಎಸ್ ವಕೀಲರವರಿಂದಃ -**

ನಾನು 5 ನೇ ತರಗತಿಯವರೆಗೂ ಓದಿದ್ದು, ವ್ಯವಸಾಯ ಮಾಡುತ್ತೇನೆ, ನನಗೆ 2 ವರೆ ಎಕರೆ ಜಮೀನು ಇದೆ ಮತ್ತು 3 ಎಕರೆ ಜಮೀನನ್ನು ಗುತ್ತಿಗೆ ಮಾಡುತ್ತಿದ್ದೆನೆ. ನನ್ನ ಹೆಸರಿನಲ್ಲಿ 2 ವರೆ ಎಕರೆ ಜಮೀನು ಇದೆ. ಇಬ್ಬರು ಸಹೋದರರು ಇದ್ದೇವೆ. ವಿಭಾಗವಾಗಿದ್ದೇವೆ. ನಮ್ಮ ಕುಟುಂಬದಲ್ಲಿ 4 ಜನರು ಇದ್ದೇವೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ನನ್ನ ಇಬ್ಬರು ಮಕ್ಕಳು ಇದ್ದೇವೆ. ವಾರ್ಷಿಕವಾಗಿ 5-6 ಲಕ್ಷ ಆದಾಯ ಇದೆ. ನಾನು ಕಬ್ಬು ಬೆಳೆಯುತ್ತೇನೆ. ಅದನ್ನು ಫ್ಯಾಕ್ಟರಿಗೆ ಹಾಕುತ್ತೇನೆ. ಸದರಿಯವರು ಖಾತೆಯ ಮೂಲಕ ಹಣ ವರ್ಗಾಹಿಸುತ್ತಾರೆ.

ಆರೋಪಿಯವರು ನನ್ನ ಅಣ್ಣನಾದ ಕುಮಾರ್ ರವರಿಗೆ ಪರಿಚಯವಿದ್ದು ಅವರ ಮೂಲಕ 2022 ರಿಂದ ನನಗೆ ಪರಿಚಯವಾಗಿರುತ್ತಾರೆ. ನನಗೆ ಆರೋಪಿಯ ಪರಿಚಯವಿಲ್ಲ ಮತ್ತು ಸದರಿಯವರೊಂದಿಗೆ ಹಣಕಾಸಿನ ವ್ಯವಹಾರ ಮಾಡಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಿಪಿ-1 ರ ಚೆಕ್ ನ್ನು ನನ್ನ ಅಣ್ಣ ನನಗೆ ನೀಡಿ ನನ್ನ ಮೂಲಕ ಪ್ರಕರಣ ದಾಖಲಿಸಿದ್ದಾರೆಂದರೆ ಸರಿಯಲ್ಲ.

ನಾನು ಮತ್ತು ನನ್ನ ಅಣ್ಣ ಅನ್ಯೋನ್ಯವಾಗಿದ್ದೇವೆಂದರೆ ಸರಿ. ನನ್ನ ಅಣ್ಣ ಆರೋಪಿಯ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ನನ್ನ ನಡುವಿನ ಹಣಕಾಸಿನ ವಿಚಾರವನ್ನು ನನ್ನ ಅಣ್ಣನಿಗೆ ಹೇಳಿರಲಿಲ್ಲ. ಸಾಕ್ಷಿ ಮುಂದುವರೆದು ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿದ ನಂತರ ಹೇಳಿದ್ದೆನೆ ಎನ್ನುತ್ತಾರೆ. ಆರೋಪಿಯವರು ಬಾರ್ ಗಳನ್ನು ಲೀಸ್ ನಲ್ಲಿ ನಡೆಸುತ್ತಿದ್ದರು. ಸದರಿಯವರು ಗೊರವನಹಳ್ಳಿ ಗ್ರಾಮದವರು. ಆರೋಪಿಯ ತಂದೆಯ ಹೆಸರನ್ನು ಮರೆತಿದ್ದೆನೆ. ದೂರು ಮತ್ತು ನೋಟೀಸ್ ನಲ್ಲಿ ಆರೋಪಿಯ ತಂದೆಯ ಹೆಸರನ್ನು ಏನು ನಮೂದಿಸಿದ್ದೆನೆಂದು ನೆನಪಿಲ್ಲ.

ನಾನು ಆರೋಪಿಯು ವಾಸಿಸುವ ಮನೆಗೆ ಹೋಗಿದ್ದೆನೆ. ಅವರ ಕುಟುಂಬದ ಬಗ್ಗೆ ತಿಳಿದುಕೊಂಡಿದ್ದೆನೆ. ಸದರಿಯವರಿಗೆ ತಂದೆ ಇದ್ದಾರೆ. 2023 ಜನವರಿಯಲ್ಲಿ ಆರೋಪಿಯು ನನ್ನನ್ನು ಸಾಲ ಕೇಳಿರುತ್ತಾರೆ, ದಿನಾಂಕ ನೆನಪಿಲ್ಲ. ದಿ 03-08-2023 ರಲ್ಲಿ ಸಾಲ ನೀಡಿದ್ದೆನೆ. ಸದರಿ ವೇಳೆಯಲ್ಲಿ ನನ್ನ ಖಾತೆಯಲ್ಲಿ ಹಣವಿತ್ತು. ನಾನು ಕಾವೇರಿ ಗ್ರಾಮೀಣ ಬ್ಯಾಂಕ್ ಕೊಪ್ಪ

ಶಾಖೆಯಲ್ಲಿ ಖಾತೆ ಹೊಂದಿದ್ದೆನೆ. ಸದರಿ ಖಾತೆಯ ದಾಖಲಾತಿಯನ್ನು ಹಾಜರುಪಡಿಸಿದ್ದೆನೆ. ನನ್ನ ಖಾತಾ ದಾಖಲಾತಿಯನ್ನು ಹಾಜರುಪಡಿಸಿಲ್ಲದಿದ್ದರೂ ಸುಳ್ಳು ನುಡಿಯುತ್ತಿದ್ದೆನೆಂದರೆ ನಮ್ಮ ವಕೀಲರಿಗೆ ನೀಡಿದ್ದೆನೆ ಎನ್ನುತ್ತಾರೆ. ಸದರಿ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಬ್ಯಾಂಕಿನಲ್ಲಿ ವಿಚಾರಿಸುತ್ತೇನೆ ಎನ್ನುತ್ತಾರೆ.

ಆರೋಪಿಯವರು ದಿ 10-10-2023 ರಂದು ಮನೆಯ ಬಳಿ ಚೆಕ್ ನೀಡಿರುತ್ತಾರೆ. ನಿಪಿ-1 ರಲ್ಲಿನ ಒಕ್ಕಣೆಯನ್ನು ನಾನೇ ಬರೆದಿದ್ದೆನೆಂದರೆ ಸರಿ. ಆರೋಪಿಯ ಸಹಿಯನ್ನು ಕೂಡ ನಕಲು ಮಾಡಿದ್ದೆನೆಂದರೆ ಸರಿಯಲ್ಲ. ಸಾಲ ನೀಡಿದಾಗ ಭದ್ರತೆಗಾಗಿ ದಾಖಲಾತಿ ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ 2 ತಿಂಗಳಲ್ಲಿ ವಾಪಸ್ಸು ಮಾಡುವುದಾಗಿ ಹೇಳಿದ್ದರು ಎನ್ನುತ್ತಾರೆ. ಆರೋಪಿಯವರು ಒಳ್ಳೆಯ ಬಿಸಿನೆಸ್ ಮಾಡುತ್ತಿದ್ದು ಸಾಕಷ್ಟು ಆದಾಯ ಹೊಂದಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೈ ಸಾಲ ಮಾಡಿಕೊಂಡಿದ್ದರು ಎನ್ನುತ್ತಾರೆ.

ಆರೋಪಿಯ ಪರಿಚಯವಿಲ್ಲದ ಕಾರಣ ಸದರಿಯವರ ಹೆಸರನ್ನು ಹೇಳದೇ ನನ್ನ ಅಣ್ಣನ ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೆನೆಂದರೆ ಸರಿಯಲ್ಲ. ನಾನು ಬಿಪಿಎಲ್ ಕಾರ್ಡ್ ಹೊಂದಿದ್ದೆನೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಾಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು